## ಕೊಪ್ಪಳ - ಹಪ್ಪಳ

ಇತ್ತೀಚೆಗೆ ಸ್ನೇಹಿತರೆಲ್ಲ ಸೇರಿ ಕೆಲಸದ ನಿಮಿತ್ತ ಕೊಪ್ಪಳಕ್ಕೆ ಹೊರಟಿದ್ದೆವು. ಹೇಳಿ ಕೇಳಿ ಬಿರು ಬೇಸಿಗೆಯ ದಿನಗಳು. ಅದು ಬೇರೆ ಅಂದು ತಾಪಮಾನ ಕೊಂಚ ಹೆಚ್ಚಾಗಿಯೇ ಇತ್ತು. ನಮ್ಮ ಗ್ರಹಚಾರಕ್ಕೆ ದಾರಿ ಮಧ್ಯೆ ತಾಂತ್ರಿಕ ಕಾರಣದಿಂದ ಕಾರಿನ ಏ.ಸಿ. ಕೂಡ ನಿಂತು ಹೋಯಿತು. ಆ ಅಸದಳ ಸೆಕೆ ಸಹಿಸಿಕೊಳ್ಳಲಾಗದೇ ನಮ್ಮಲ್ಲೊಬ್ಬರು ಕೊಪ್ಪಳ ಬರುವಷ್ಟರಲ್ಲಿ ನಾವು ಸುಟ್ಟ ಹಪ್ಪಳ ಆಗೋದು ಗ್ಯಾರಂಟಿ ಅಂದುಬಿಟ್ಟರು. ಬಿಸಿಲಿನ ಪ್ರ'ತಾಪ'ದ ನಡುವೆಯೂ ಎಲ್ಲರ ಮೊಗದಲ್ಲಿ ಒಂದು ಕ್ಷಣ ನಗೆಯ ಬುಗ್ಗೆ ಎದ್ದಿತ್ತು.

**ಸ್ವರೂಪಾನಂದ ಕೊಟ್ಟೂರು**





ಕಲೆ: ಗಣೇಶ ಆಚಾರ್ಯ

## ಪೂಜಾರಮ್ಮ

ಕೆಲದಿನಗಳ ಹಿಂದೆ ಸಂಬಂಧಿಕರ ಮನೆಯಲ್ಲಿ ಪೂಜೆಗೆಂದು ಹೋಗಿದ್ದೆವು. ತಮ್ಮನ ಹೆಂಡತಿ ಪೂಜಾ ಬಂದಿದ್ದಳು. ಪೂಜಾಳ ಜೊತೆಗೆ ಅವರ ಅಮ್ಮನೂ ಬರುತ್ತೇನೆ ಎಂದಿದ್ದರು. ಆದರೆ, ಪೂಜೆ ಆರಂಭವಾದರೂ ಅವರು ಕಾಣಲಿಲ್ಲ. ಹಾಗಾಗಿ, 'ಪೂಜಾರಮ್ಮ ಬಂದಿಲ್ವಾ?' ಎಂದು ಮನೆಯವರನ್ನು ಕೇಳಿದೆ. ಅದನ್ನು ಕೇಳಿಸಿಕೊಂಡ ಅರ್ಚಕರು, 'ಇಲ್ಲಮ್ಮ, ಇಲ್ಲಿ ಪೂಜಾರಮ್ಮ ಇರುವುದಿಲ್ಲ, ಪೂಜಾರಪ್ಪ ಮಾತ್ರ ಪೂಜೆ ಮಾಡುವುದು' ಎಂದಾಗ ನಗು ತಡೆಯಲಾಗಲಿಲ್ಲ.

**ನಳಿನಿ ಟಿ. ಭೀಮಪ್ಪ**